# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1043 |
| ಸದಸ್ಯರ ಹೆಸರು | ಶ್ರೀ ಬಿ.ಜಿ ಪಾಟೀಲ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 25-08-2026 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ರೈತರಿಗೆ ಪ್ರತಿ ಎಕರೆಗೆ ಎಷ್ಟು ಚೀಲ ಯೂರಿಯಾ, ಡಿ.ಎ.ಪಿ ಹಾಗೂ ಇನ್ನಿತರ ಗೊಬ್ಬರಗಳನ್ನು ವಿತರಿಸಲಾಗುತ್ತಿದೆ; ಹಾಗೂ ರೈತರಿಗೆ ಅಗತ್ಯವಿರುವಷ್ಟು ಗೊಬ್ಬರ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಮುಂಗಾರು ಹಂಗಾಮಿನ ಪ್ರಾರಂಭದಲ್ಲಿ(ಏಪ್ರಿಲ್ ರಿಂದ ಜೂನ್) ಮಧ್ಯ ಪ್ರಾಚ್ಯದ ಬಿಕ್ಕಟ್ಟಿನಿಂದಾಗಿ ರಸಗೊಬ್ಬರ ಮತ್ತು ರಸಗೊಬ್ಬರ ತಯಾರಿಸುವ ಕಚ್ಚಾ ವಸ್ತುಗಳ ಆಮದಿನಲ್ಲಿ ವ್ಯತ್ಯಯವಾದ ಕಾರಣ ಕೇಂದ್ರ ಸರ್ಕಾರದಿಂದ ರಸಗೊಬ್ಬರ ಪೂರೈಕೆಯಲ್ಲಿ ಕೊರತೆಯಾದುದರಿಂದ ಜಿಲ್ಲೆಗಳಲ್ಲಿ ಲಭ್ಯವಿದ್ದ ಡಿ.ಎ.ಪಿ ಮತ್ತು ಯೂರಿಯಾ ರಸಗೊಬ್ಬರದ ದಾಸ್ತಾನು ಪ್ರಮಾಣ ಮತ್ತು ರೈತರ ಬೇಡಿಕೆಯನ್ನಾಧರಿಸಿ ರಸಗೊಬ್ಬರವನ್ನು ವಿತರಣೆ ಮಾಡಲು ಕ್ರಮ ಕೈಗೊಳ್ಳಲಾಗಿತ್ತು.<br><br>ಡಿಎಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಕಾಂಪ್ಲೆಕ್ಸ್ ರಸಗೊಬ್ಬರಗಳು, ಎಸ್ಎಸ್‌ಪಿ/ಟಿಎಸ್‌ಪಿ ಮತ್ತು ನ್ಯಾನೋ ಡಿ.ಎ.ಪಿ ಬಳಕೆಗೆ ವ್ಯಾಪಕವಾಗಿ ಪ್ರಚಾರ ನೀಡಿ ರೈತರಲ್ಲಿ ಅರಿವು ಮೂಡಿಸಿ ಡಿ.ಎ.ಪಿ ರಸಗೊಬ್ಬರದ ಕೊರತೆಯನ್ನು ನೀಗಿಸಲಾಗುತ್ತಿದೆ.<br><br>ಪ್ರಸ್ತುತ ಪೂರೈಕೆ/ಲಭ್ಯತೆಗನುಗುಣವಾಗಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ರಸಗೊಬ್ಬರಗಳ ವಿತರಣೆ ಮಾಡಲಾಗುತ್ತಿದೆ. |
| ಆ) | ಯೂರಿಯಾ, ಡಿ.ಎ.ಪಿ ಹಾಗೂ ಇನ್ನಿತರ ಗೊಬ್ಬರಗಳನ್ನು ಯಾವ ಜಿಲ್ಲೆಯಲ್ಲಿ ರೈತರಿಗೆ ವಿತರಿಸಲು ಸಂಬಂಧಪಟ್ಟ ವಿವಿಧ ಆಗ್ರೋ ಏಜೆನ್ಸಿಗಳಿಗೆ ಸರ್ಕಾರ ಸೂಚಿಸಿದೆ; | ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಮಾಹೆವಾರು, ತಯಾರಕ ಸಂಸ್ಥೆವಾರು ಹಂಚಿಕೆಯಾಗುವ ವಿವಿಧ ಗ್ರೇಡ್‌ನ ಸಹಾಯಧನದ ರಸಗೊಬ್ಬರಗಳನ್ನು ತಯಾರಿಕಾ ಸಂಸ್ಥೆ/ರಸಗೊಬ್ಬರ ಸರಬರಾಜುದಾರರ ಮೂಲಕ ರಸಗೊಬ್ಬರ ಪರವಾನಗಿ ಹೊಂದಿರುವ ಖಾಸಗಿ/ಸಹಕಾರ ಸಂಘಗಳ ಚಿಲ್ಲರೆ ರಸಗೊಬ್ಬರ ಮಾರಾಟಗಾರರ ಮೂಲಕ ರೈತರಿಗೆ ಮಾರಾಟ ಮಾಡಲಾಗುತ್ತಿದೆ. |

| | | |
|---|---|---|
| ಇ) | ಸರ್ಕಾರ ಪ್ರತಿ ಎಕರೆ/ರೈತರಿಗೆ ನೀಡಲು ಉದ್ದೇಶಿಸಿರುವ ಗೊಬ್ಬರವನ್ನು ಹಂತ ಹಂತದ ಬದಲಾಗಿ ಒಂದೇ ಬಾರಿಗೆ ವಿತರಿಸಲು ಕ್ರಮ ಕೈಗೊಳ್ಳುವುದೇ; ರೈತರಿಗೆ ಯಾವ ಮಾನದಂಡದ ಆಧಾರದ ಮೇಲೆ ಗೊಬ್ಬರ ವಿತರಣೆ ನಿಗದಿ ಮಾಡುತ್ತಿದೆ, ಈಗ ನೀಡುತ್ತಿರುವ ಗೊಬ್ಬರದ ಪ್ರಮಾಣವನ್ನು ಹೆಚ್ಚಿಸುವ ಪ್ರಸ್ತಾಪ ಸರ್ಕಾರದ ಗಮನದಲ್ಲಿದೆಯೇ? | ಪ್ರಸ್ತುತ ರಸಗೊಬ್ಬರಗಳ ಸರಬರಾಜನ್ನು ಗಮನದಲ್ಲಿರಿಸಿ ರೈತರ ಹಿಡುವಳಿ ಹಾಗೂ ಬೆಳೆಗನುಸಾರವಾಗಿ ಕೃಷಿ ವಿಶ್ವವಿದ್ಯಾಲಯಗಳ ಶಿಫಾರಸ್ಸಿನಂತೆ ರಸಗೊಬ್ಬರಗಳ ವಿತರಣೆ ಮಾಡಲಾಗುತ್ತಿದೆ. |

ಸಂಖ್ಯೆ: AGRI/222/ACT/2026

P. M. Narendraswamy

**(ಪಿ. ಎಂ. ನರೇಂದ್ರ ಸ್ವಾಮಿ)**

ಕೃಷಿ ಸಚಿವರು